1144 (1331) ಶ್ರೀ ಶಂಕರಲಿಂಗೇ ಗೌಡ ಹೆಚ್.ಎಸ್. (ಚಾಮರಾಜ).– ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ರಾಜ್ಯದಲ್ಲಿರುವ ಸಂಘಟಿತರ ಕಾರ್ಮಿಕರ ಹಾಗೂ ಅಸಂಘಟಿತರ ಕಾರ್ಮಿಕರ ಸಂಖ್ಯೆ ಎಷ್ಟು ;

ಆ) ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿರುವ ಸೌಲಭ್ಯ, ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿ ನೀಡುವುದು ;

ಇ) ಕಾರ್ಮಿಕ ಕಲ್ಯಾಣಕ್ಕಾಗಿ ಸರ್ಕಾರ ನಿಯಮ ರೂಪಿಸಿದ್ದರೂ ಸಹ ಕಾರ್ಮಿಕರ ಶೋಷಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಕಾರ್ಮಿಕರ ಶೋಷಣೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು).–

ಅ) ಕರ್ನಾಟಕ ರಾಜ್ಯದಲ್ಲಿರುವ

1. ಸಂಘಟಿತ ಕಾರ್ಮಿಕರ ಸಂಖ್ಯೆ – 18,43,964

2. ಅಸಂಘಟಿತ ಕಾರ್ಮಿಕರ ಸಂಖ್ಯೆ – 2,35,34,791

(2001ನೇ ಸಾಲಿನ ಜನಗಣತಿಯ ಮಾಹಿತಿ ಪ್ರಕಾರ)

ಆ) 1. ಸದ್ಯಕ್ಕೆ ಅಸಂಘಟಿತ ಕಾರ್ಮಿಕರ ಪೈಕಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗಾಗಿ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ನಿಬಂಧನೆಗಳು ವಿನಿಮಯ) ಕರ್ನಾಟಕ ನಿಯಮಗಳು – 2006ನ್ನು ಜಾರಿಗೊಳಿಸಲಾಗಿದೆ. ಇದರಡಿ ಸದರಿ ಕಾರ್ಮಿಕರಿಗೆ ಪಿಂಚಣಿ, ಮನೆ ನಿರ್ಮಾಣ/ಮನೆ ಖರೀದಿಗಾಗಿ ಸಾಲದ ಸೌಲಭ್ಯ, ಅಪಘಾತ ಪರಿಹಾರ, ವೈದ್ಯಕೀಯ ಚಿಕಿತ್ಸೆ, ಮಕ್ಕಳ ಮದುವೆಗೆ/ವಿದ್ಯಾಭ್ಯಾಸಕ್ಕಾಗಿ ಸಹಾಯ, ಹೆರಿಗೆ ಭತ್ಯೆ, ಅಂತ್ಯಸಂಸ್ಕಾರಕ್ಕೆ ಸಹಾಯ, ಅಂಗವಿಕಲತೆಗಾಗಿ ಪಿಂಚಣಿ, ಕಟ್ಟಡ ನಿರ್ಮಾಣದ ಸಾಮಗ್ರಿಗಳನ್ನು ಖರೀದಿಸಲು ಸಹಾಯ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆ. ಸದರಿ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ಸ್ಥಾಪಿಸಲಾಗಿದೆ.

2. ಅಲ್ಲದೆ, ಕೇಂದ್ರ ಸರ್ಕಾರದ ಅಸಂಘಟಿತ ವಲಯದ ಕಾರ್ಮಿಕರ ಸಾಮಾಜಿಕ ಭದ್ರತಾ ಬಿಲ್ – 2007 ಅನ್ನು ಜಾರಿಗೊಳಿಸಿದ ನಂತರ ಇನ್ನುಳಿದ ಅಸಂಘಟಿತ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

3. ಕೇಂದ್ರ ಸರ್ಕಾರದ 2007ರ ಪರಿಷ್ಕೃತ ಸಮಗ್ರ ವಸತಿ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ಆರ್ಹ ಬೀಡಿ ಕಾರ್ಮಿಕರಿಗೆ ವಸತಿ ಗೃಹಗಳ ನಿರ್ಮಾಣಕ್ಕಾಗಿ ತಲಾ 40,000 ರೂ.ಗಳ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

4. ಅಲ್ಲದೆ, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದಲೂ ಕೂಡ ಕಾರ್ಮಿಕರಿಗೆ ವೈದ್ಯಕೀಯ ಧನ ಸಹಾಯ, ಅಪಘಾತ ಧನ ಸಹಾಯ, ಅಂಗವಿಕಲ ಕಾರ್ಮಿಕರಿಗೆ ಮೂರು ಚಕ್ರದ ಸೈಕಲ್‌ನ್ನು ನೀಡುವ ಸೌಲಭ್ಯ ಹಾಗೂ ಮೃತಪಟ್ಟ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನಸಹಾಯವನ್ನು ಒದಗಿಸಲಾಗುತ್ತಿದೆ.

5. ಇದೂ ಅಲ್ಲದೆ, ವಿವಿಧ ಕಾರ್ಮಿಕ ಕಾಯ್ದೆಗಳಡಿಯಲ್ಲಿ ಕಾರ್ಮಿಕರಿಗಾಗಿ ಕನಿಷ್ಠ ವೇತನ, ಕೆಲಸದ ವೇಳೆ, ಹೆರಿಗೆ ಭತ್ಯೆ, ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜೆ, ಗಳಿಕೆ ರಜೆ, ಬೋನಸ್ ಉಪಧನ, ಕಾರ್ಮಿಕರ ನಷ್ಟ ಪರಿಹಾರ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಿಕೊಡಲಾಗಿದೆ.

ಇ) ಹೌದು.

ಈ) 2005 ಮತ್ತು 2006ನೇ ಸಾಲಿನಲ್ಲಿ ವಿವಿಧ ಕಾರ್ಮಿಕ ಕಾಯ್ದೆಗಳಡಿ ಇಲಾಖೆಯ ವತಿಯಿಂದ ನಡೆಸಲಾಗಿರುವ ತಪಾಸಣೆಗಳ ಬಗ್ಗೆ ವಿವರಗಳನ್ನು ಅನುಬಂಧ–ಅ ರಲ್ಲಿ ಒದಗಿಸಲಾಗಿದೆ.

ಅನುಬಂಧ – ಅ

ಕಾಯ್ದೆಗಳು	ತಪಾಸಣೆಗಳ ಸಂಖ್ಯೆ 2005ನೇ ವರ್ಷಕ್ಕೆ	ತಪಾಸಣೆಗಳ ಸಂಖ್ಯೆ 2006ನೇ ವರ್ಷಕ್ಕೆ
ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯಿದೆ 1961	32735	37335
ಹೆರಿಗೆ ಭತ್ಯೆ ಕಾಯಿದೆ, 1961	35	4
ವೇತನ ಪಾವತಿ ಕಾಯಿದೆ, 1936	6514	3955
ತೋಟ ಕಾರ್ಮಿಕ ಕಾಯಿದೆ, 1951	234	278
ಉಪಧನ ಪಾವತಿ ಕಾಯಿದೆ, 1972	699	567
ಮೋಟಾರ್ ವಾಹನ ಸಾರಿಗೆ ಕಾಯಿದೆ, 1961	320	203

ಕರ್ನಾಟಕ ಕೈಗಾರಿಕಾ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಕಾಯಿದೆ, 1963	97	59
ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯಿದೆ, 1965	589	408
ಬೋನಸ್ಸು ಪಾವತಿ ಕಾಯಿದೆ, 1965	70	80
ಬೀಡಿ ಮತ್ತು ಸಿಗಾರ್ ಕಾರ್ಮಿಕರ ಕಾಯಿದೆ, 1966	306	308
ಸಮಾನ ವೇತನ ಕಾಯಿದೆ, 1976	2507	2726
ಅಂತರ ರಾಜ್ಯ ವಲಸೆ ಕೆಲಸಗಾರರ ಕಾಯಿದೆ, 1979	31	24
ಗುತ್ತಿಗೆ ಕಾರ್ಮಿಕ ಕಾಯಿದೆ, 1970	608	5424
ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯಿದೆ, 1986	33190	50030
ಕನಿಷ್ಠ ವೇತನ ಕಾಯಿದೆ, 1948	32147	7823
ಕೈಗಾರಿಕಾ ಮತ್ತು ಉದ್ಯೋಗ (ಸ್ಥಾಯಿ ಆದೇಶ) ಕಾಯಿದೆ, 1946	–	9

1. ವಿವಿಧ ಕಾರ್ಮಿಕ ಕಾಯಿದೆಗಳ ಉಲ್ಲಂಘನೆಗಾಗಿ 2,637 ಮೊಕದ್ದಮೆಗಳನ್ನು ಹೂಡಲಾಗಿದೆ.
2. ಕಾರ್ಮಿಕ ಪರಿಹಾರ ಕಾಯಿದೆಯಡಿಯಲ್ಲಿ ರೂ. 60,96,76,080/– ಗಳ ಪರಿಹಾರ ಕಾರ್ಮಿಕರಿಗೆ ವಿತರಿಸಲಾಗಿದೆ.
3. 1072 ಕಾರ್ಮಿಕರಿಗೆ ಉಪಧನ ಪಾವತಿಸಲು ಆದೇಶಿಸಲಾಗಿದೆ.
4. ರೂ. 5,73,21,373/– ಕನಿಷ್ಠ ವೇತನವನ್ನು ವಸೂಲಿ ಮಾಡಿ ಕಾರ್ಮಿಕರಿಗೆ ಪಾವತಿಸಲಾಗಿದೆ.

(ಅಬ್ದುಲ್ ರೆಹಮಾನ್)

ಪೀಠಾಧಿಕಾರಿ–2, ಕಾರ್ಮಿಕ ಇಲಾಖೆ

1145 (1332) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ;

ಅ) ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಸ್ಥಾಪನೆಯಾದದ್ದು ಯಾವಾಗ ;

ಆ) ಈ ಕಾಲೇಜಿನಲ್ಲಿ ಕೊರತೆ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು) ;

ಇ) ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಈ ಕಾಲೇಜಿನಲ್ಲಿ ಕೊರತೆ ಇರುವ ಸೌಲಭ್ಯಗಳು ಹಾಗೂ ಈ ಕೊರತೆಯನ್ನು